# ದಿನಾಂಕ:27-11-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 5 (141)/2010-11**

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಆರೋಗ್ಯ ಮತ್ತು ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಿಕೊಳ್ಳಲು ನೇಮಕಾತಿ ಸಮಿತಿ ರಚಿಸಿಕೊಡುವಂತೆ ಕೋರಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರವರು ಮಂಡಿಸಿರುವ ಟಿಪ್ಪಣಿಯಲ್ಲಿ 1997 ರಲ್ಲಿ ರಚಿಸಲಾಗಿದ್ದ ನೇಮಕಾತಿ ಸಮಿತಿಯಲ್ಲಿ ಪಾಲಿಕೆಯ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಂತೆ ರಚಿಸಲಾಗಿದ್ದು, ನೇಮಕಾತಿ ಸಮಿತಿಯಲ್ಲಿ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಅಧ್ಯಕ್ಷರಾಗಿರುವುದಾಗಿ ಹೇಳಿರುತ್ತಾರೆ. ಆದರೆ, ಅಧಿಕಾರೇತರ ಸದಸ್ಯರು ಅಧ್ಯಕ್ಷರಾಗಿರುವುದು ತಿಳಿದು ಬಂದಿರುವ ಹಿನ್ನಲೆಯಲ್ಲಿ ಅಧ್ಯಕ್ಷರು ಅಧಿಕಾರಿ ಸದಸ್ಯರೇ ಅಥವಾ ಅಧಿಕಾರೇತರ ಸದಸ್ಯರೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ಮರು ಮಂಡಿಸಲು ಕಡತವನ್ನು ಹಿಂದಿರುಗಿಸಲಾಗಿರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ 1997 ರ ನೇಮಕಾತಿ ಸಭೆಯಲ್ಲಿ ಅಧಿಕಾರಿ ಸದಸ್ಯರೇ ಅಧ್ಯಕ್ಷರಾಗಿರುವುದು ಕಂಡು ಬಂದಿದ್ದು, ಆದರೆ 1998 ರ ಸರ್ಕಾರವು ಅನುಮೋದನೆ ನೀಡಿರುವ ನೇಮಕಾತಿ ಸಮಿತಿಯಲ್ಲಿ ಅಧಿಕಾರೇತರ ಸದಸ್ಯರ ಅಧ್ಯಕ್ಷರಾಗಿರುವುದು ಕಂಡು ಬಂದಿರುತ್ತದೆ. 1998 ರ ನೇಮಕಾತಿ ಸಮಿತಿಯಲ್ಲಿ ಅಧಿಕಾರಿ ಸದಸ್ಯರು ಹಾಗೂ ಅಧಿಕಾರೇತರ ಸದಸ್ಯರ ವಿವರ ಈ ಕೆಳಕಂಡಂತಿದೆ;

| ಅಧಿಕಾರೇತರ – ನಗರಸಭಾ ಸದಸ್ಯರು | | | |
|---|---|---|---|
| ಕ್ರ.ಸಂ. | ಶ್ರೀಮತಿ/ ಶ್ರೀಯುತರುಗಳಾದ | ಪದನಾಮ | ವಾರ್ಡ್ ಸಂಖ್ಯೆ |
| 1 | ಎಂ.ಚನ್ನಪ್ಪ | ಅಧ್ಯಕ್ಷರು | 36 |
| 2 | ಸರಳಾ ಪ್ರಕಾಶ್ | ಸದಸ್ಯರು | 71 |
| 3 | ವಿಜಯಲಕ್ಷ್ಮೀ | ಸದಸ್ಯರು | 68 |
| 4 | ಎಂ. ಜಹೀದಾ | ಸದಸ್ಯರು | 69 |
| 5 | ಎಸ್. ಲೋಕೇಶ್ | ಸದಸ್ಯರು | 34 |
| 6 | ಸಿ.ಎಸ್. ಸದಾಶಿವ | ಸದಸ್ಯರು | 49 |
| 7 | ಎನ್. ಮಂಜುನಾಥ ರೆಡ್ಡಿ | ಸದಸ್ಯರು | 66 |

....................2

## ಅಧಿಕಾರಿಗಳು - ಸದಸ್ಯರು

| | | | |
|---|---|---|---|
| 1. | ಜಂಟಿ ಆಯುಕ್ತರು (ಅಭಿವೃದ್ಧಿ), ಬೆಂಗಳೂರು ಮಹಾನಗರ ಪಾಲಿಕೆ | - | ಸದಸ್ಯರು |
| 2. | ಉಪ ಆಯುಕ್ತರು (ಆಡಳಿತ), ಬೆಂಗಳೂರು ಮಹಾನಗರ ಪಾಲಿಕೆ | - | ಸದಸ್ಯ ಕಾರ್ಯದರ್ಶಿ |
| 3. | ಇಲಾಖಾ ಮುಖ್ಯಸ್ಥರು, (ನೇಮಕಾತಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು) | - | ಸದಸ್ಯರು |
| 4. | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು ನಗರ ಜಿಲ್ಲೆ | - | ಸದಸ್ಯರು |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಅನುಮೋದನೆ ನೀಡಿರುವ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಸಿ ಹಾಗೂ ಗ್ರೂಪ್-ಡಿ ಹುದ್ದೆಗಳನ್ನು ಆದಷ್ಟು ಬೇಗನೆ ನೇರ ನೇಮಕಾತಿಯಿಂದ ತುಂಬಿಕೊಳ್ಳಬೇಕಾಗಿರುವುದರಿಂದ, ಮೇಲ್ಕಂಡಂತೆ ನೇಮಕಾತಿ ಸಮಿತಿಯನ್ನು ರಚಿಸುವ ಬಗ್ಗೆ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-11-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಹಾಲಿ ಇರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಮಿತಿಯೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವುದೆಂದು ತೀರ್ಮಾನಿಸಿದೆ.

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಹಾಲಿ ಇರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಮಿತಿಯೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವುದೆಂದು ತೀರ್ಮಾನಿಸಿದೆ".

(ಎನ್.ದಯಾನಂದ್)
ಉಪ ಮಹಾಪೌರರು